# ಕರ್ನಾಟಕ ವಿಧಾನ ಪರಿಷತ್ತು

**ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 102 (105)**
**ಸದಸ್ಯರ ಹೆಸರು : ಶ್ರೀ ಬಿ.ಜಿ. ಪಾಟೀಲ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)**
**ಉತ್ತರಿಸಬೇಕಾದ ದಿನಾಂಕ : 27.01.2026**
**ಉತ್ತರಿಸಬೇಕಾದ ಸಚಿವರು : ನಗರಾಭಿವೃದ್ಧಿ ಮತ್ತು ನಗರ ಯೋಜನೆ ಸಚಿವರು**

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| (ಅ) | ಕಲಬುರಗಿಯ ಕಪನೂರ ಗ್ರಾಮದ ವ್ಯಾಪ್ತಿಯ ಸಿದ್ಧಾರೂಡ ಕಾಲೋನಿಯ ಸರ್ವೆ ನಂ.174 ಮತ್ತು 175 ರಲ್ಲಿ ಇರುವ 350ಕ್ಕೂ ಹೆಚ್ಚು ಮನೆಗಳು ಹಾಗೂ 2000ಕ್ಕೂ ಹೆಚ್ಚಿನ ಜನಸಂಖ್ಯೆ ಹೊಂದಿ ಕಳೆದ 30 ವರ್ಷಗಳಿಂದ ಅತ್ತ ಮಹಾನಗರ ಪಾಲಿಕೆ ವ್ಯಾಪ್ತಿಗೂ ಸೇರಿಸದೆ ಇತ್ತ ತಾಜಸುಲ್ತಾನಪುರ ಗ್ರಾಮ ಪಂಚಾಯಿತಿ ವ್ಯಾಪ್ತಿಗೂ ಸೇರಿಸದೆ ಇಲ್ಲಿನ ನಿವಾಸಿಗಳನ್ನು ಅತಂತ್ರ ಸ್ಥಿತಿಯಲ್ಲಿಟ್ಟಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಸರ್ಕಾರದ ಅಧಿಸೂಚನೆ ಸಂಖ್ಯೆ: ಹೆಚ್‌ಯುಡಿ/401/ಎಮ್ ಎಲ್‌ಆರ್/95, ದಿನಾಂಕ: 19.10.1995 ರಂತೆ ಕಪನೂರ ಗ್ರಾಮದ ಸರ್ವೆ ನಂಬರಗಳಾದ 174 ಮತ್ತು 175 ಪಾಲಿಕೆಯ ವ್ಯಾಪ್ತಿಗೆ ಒಳಪಟ್ಟಿರುವುದಿಲ್ಲ. |
| (ಆ) | ಸಿದ್ಧಾರೂಢ ಕಾಲೋನಿಯ ನಿವಾಸಿಗಳು ಚುನಾವಣೆ ಸಮಯದಲ್ಲಿ ಗ್ರಾಮ ಪಂಚಾಯಿತಿ ಚುನಾವಣೆಗೆ ಮತದಾನ ಮಾಡುತ್ತಾರೆಯೇ; ಅಥವಾ ಕಲಬುರಗಿ ಮಹಾನಗರ ಪಾಲಿಕೆಯ ಚುನಾವಣೆಗೆ ಮತದಾನ ಮಾಡುತ್ತಾರೆಯೇ; (ವಿವರ ನೀಡುವುದು) | ಕಪನೂರ ಗ್ರಾಮದ ವ್ಯಾಪ್ತಿಯಲ್ಲಿನ ಸರ್ವೇ ನಂ. 174 ಮತ್ತು 175 ರಲ್ಲಿ ಬರುವ ಸಿದ್ಧಾರೂಡ ಕಾಲೋನಿ ನಿವಾಸಿಗಳು ಪಾಲಿಕೆಯ ವಾರ್ಡ್ ಮ್ಯಾಪ್ ಪ್ರಕಾರ ಮತದಾರರಾಗಿರುವುದಿಲ್ಲ. |
| (ಇ) | ಸದರಿ ಕಾಲೋನಿಯ ನಿವಾಸಿಗಳು ಮಹಾನಗರ ಪಾಲಿಕೆಯ ಚುನಾವಣೆಯಲ್ಲಿ ಮತದಾನ ಮಾಡಿದ್ದಲ್ಲಿ ಸದರಿ ಕಾಲೋನಿಯನ್ನು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ/ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಸೇರಿಸಿಕೊಂಡು ಆಸ್ತಿಗಳಿಗೆ ಎ. ಬಿ. ಖಾತಾ ನೀಡಿ ರಸ್ತೆ, ಕುಡಿಯುವ ನೀರು ಹಾಗೂ ಇನ್ನಿತರ ಮೂಲಭೂತ ಸೌಕರ್ಯಗಳನ್ನು ನೀಡಲು ಸರ್ಕಾರಕ್ಕೆ ಇರುವ ತಡೆಗಳೇನು; ಸದರಿ ಕಾಲೋನಿಯ ನಿವಾಸಿಗಳ ಸಮಸ್ಯೆಯನ್ನು ಪರಿಹರಿಸಲು ಸರ್ಕಾರ ಕೂಡಲೇ ಕ್ರಮ ವಹಿಸುವುದೆ? (ವಿವರ ನೀಡುವುದು) | ಕಪನೂರ ಗ್ರಾಮದ ವ್ಯಾಪ್ತಿಯಲ್ಲಿನ ಸರ್ವೇ ನಂ. 174 ಮತ್ತು 175ರಲ್ಲಿ ಬರುವ ಸಿದ್ಧಾರೂಡ ಕಾಲೋನಿಯನ್ನು ಪಾಲಿಕೆ ವ್ಯಾಪ್ತಿಗೆ ಸೇರಿಸಲು ಜಿಲ್ಲಾಧಿಕಾರಿಗಳಿಂದ ವರದಿ ಸ್ವೀಕೃತವಾದಲ್ಲಿ ನಿಯಮಾನುಸಾರ ಕ್ರಮವಹಿಸಲಾಗುವುದು. |

**ನಅಇ 6 ಎಸಿಜಿ 2026(ಇ)**

(ಬಿ. ಎಸ್. ಸುರೇಶ)
ನಗರಾಭಿವೃದ್ಧಿ ಹಾಗೂ ನಗರ ಯೋಜನೆ
ಸಚಿವರು